ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

**ಓ.ಎಸ್. ಸಂಖ್ಯೆ81/2015**

**ದಿನಾಂಕ 20.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಿ.ಡಬ್ಲ್ಯೂ-1

**ಪಾಟೀ ಸವಾಲುಃ 1, 2, 7 ರಿಂದ 9 ನೇ ಪ್ರತಿವಾದಿಯ ಪರ ಶ್ರೀ ಐ.ಆರ್.ಎಲ್. ವಕೀಲರಿಂದಃ**

ನನ್ನ ಗಂಡನಿಗೆ ಇಬ್ಬರು ಅಣ್ಣಂದಿರು. ನನ್ನ ಗಂಡನ ಅಣ್ಣ ತಮ್ಮಂದಿರು ಮೂರು ಜನ. ನನ್ನ ಗಂಡನ ತಂದೆ ಹೆಸರು ನಲ್ಲ ರೆಡ್ಡಿ. ನಲ್ಲ ರೆಡ್ಡಿ ತಂದೆಯ ಹೆಸರು ಸಣ್ಣ ನರಸರೆಡ್ಡಿ. ಸಣ್ಣ ನರಸರೆಡ್ಡಿಯ ಮಕ್ಕಳ ಹೆಸರು ನರಸಿಂಹರೆಡ್ಡಿ, ನಲ್ಲ ರೆಡ್ಡಿ, ಸಣ್ಣ ನರಸಿಂಹ ರೆಡ್ಡಿ. ಸಣ್ಣ ನರಸರೆಡ್ಡಿಗೆ ಪೆದ್ದ ನರಸರೆಡ್ಡಿ ಎಂಬ ಮಗ ಇದ್ದರು ಎಂದರೆ ಸರಿ. ಪೆದ್ದ ನರಸರೆಡ್ಡಿಗೆ ಒಬ್ಬನೇ ಮಗ ಅವರ ಹೆಸರು ಅದಿ ನಾರಾಯಣ ರೆಡ್ಡಿ. ನಲ್ಲರೆಡ್ಡಿಗೆ ನಾಲ್ಕು ಜನ ಮಕ್ಕಳು ಅವರ ಹೆಸರು ಪ್ರಕಾಶ ರೆಡ್ಡಿ, ರಾಮಾಂಜನೇಯ ರೆಡ್ಡಿ ,ಲಲಿತಮ್ಮ, ಪದ್ಮಾವತಿ. ಸಣ್ಣ ನರಸಿಂಹರೆಡ್ಡಿಗೆ ಮೂರು ಹೆಣ್ಣು, ಇಬ್ಬರು ಗಂಡು ಮಕ್ಕಳು. ಅವರ ಹೆಸರು ಶಿವ ರೆಡ್ಡಿ, ಕೃಷ್ಣ ರೆಡ್ಡಿ, ಪ್ರಭಾವತಿ, ಶ್ರೀದೇವಿ , ಸುನೀತಾ. ನಾನು ಈ ಮೇಲೆ ಹೇಳಿದ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಮಾಡಿದ್ದೇನೆ.

ದಾವಾ ಸ್ವತ್ತು ಮೊದಲಿಗೆ ನನ್ನ ದೊಡ್ಡ ಮಾವ ನರಸಿಂಹರೆಡ್ಡಿಗೆ ಸೇರಿದ್ದು . ನನ್ನ ದೊಡ್ಡ ಮಾವ ದಾವಾ ಸ್ವತ್ತನ್ನು ಯಾರಿಂದ ಕ್ರಯಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ ಆದರೆ ನನ್ನ ಮಾವ ದೊಡ್ಡವರ ಆಸ್ತಿ ಎಂದು ನಮಗೆ ತಿಳಿಸಿದ್ದರು. ದಾವಾ ಸ್ವತ್ತು ನನ್ನ ಗಂಡನ ತಂದೆಯ ತಂದೆ ಸಣ್ಣ ನರಸರೆಡ್ಡಿಗೆ ಸೇರಿದ ಆಸ್ತಿ ಅಲ್ಲ ಎಂದರೆ ಸಾಕ್ಷಿ ನನ್ನ ದೊಡ್ಡ ಮಾವ ದೊಡ್ಡವರಾದ ಕಾರಣ ಅವರ ಹೆಸರಿಗೆ ಆಸ್ತಿ ಮಾಡಿದ್ದಾರೆ. ನನ್ನ ಮಾವ ಸಣ್ಣ ನರಸಿಂಹ ರೆಡ್ಡಿಗೆ ದಾವಾ ಆಸ್ತಿ ಸೇರಿದ್ದು ಎಂದು ಹೇಳಿದ್ದಿರಾ ಅವರಿಗೆ ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ.

ನನ್ನ ದೊಡ್ಡ ಮಾವ ನರಸಿಂಹ ರೆಡ್ಡಿಗೆ ಯಾವ ಆಸ್ತಿಗಳಲ್ಲಿ ಎಷ್ಟು ಎಕರೆ ಜಮೀನು ಬಂದಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ಸ.ನಂ. 72 ರಲ್ಲಿ 2 ಎಕರೆ 16 ಗುಂಟೆ ಜಮೀನು ಬಂದಿದೆ ಹಾಗೂ ಬಣವೆ ಜಾಗ ಬಂದಿದೆ. ಬಣವೆ ಜಾಗದ ಸ.ನಂ. ನನಗೆ ಹೇಳಲು ಆಗುವುದಿಲ್ಲ. ಬಣವೆ ಜಾಗ ನನ್ನ ದೊಡ್ಡ ಮಾವನಿಗೆ ಹೇಗೆ ಬಂತು ನನಗೆ ಗೊತ್ತಿಲ್ಲ ಆದರೆ ದೊಡ್ಡವರ ಮೂಲಕ ಬಂದಿದೆ. ನಾನು

ಈಗ ಹೇಳಿದ ಜಮೀನುಗಳಿಗೆ ದಾವೆ ಸಲ್ಲಿಸಿದ್ದೇನೆ. ನನ್ನ ಗಂಡನ ತಂದೆಯ ತಂದೆ ಅಣ್ಣ ತಮ್ಮಂದಿರು ಈಗ ತೀರಿಕೊಂಡಿದ್ದಾರೆ. ಅವರ ವಾರುಸುದಾರರು ವಾಸವಿರುವ ಮನೆ ಸಂಖ್ಯೆ ನನಗೆ ಗೊತ್ತಿಲ್ಲ, ಆದರೆ ಅಚ್ಚಮ್ಮನಹಳ್ಳಿಯಲ್ಲಿ ವಾಸವಿದ್ದಾರೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ